ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದರ ಸೇತುವೆ ಕಟ್ಟುತಕ್ಕ ಜವಾಬುದಾರಿಯೆಲ್ಲಾ ನಮ್ಮ ರಾಜ್ಯ ಸರಕಾರದ ಪಿ. ಡಬ್ಲ್ಯು. ಡಿ. ಇಲಾಖೆಗೆ ಸೇರಿದೆ.

ಶ್ರೀ ಎ. ವಿ. ಪಾಟೀಲ್.—ಇದನ್ನು ಯಾವ ವರ್ಷದಲ್ಲಿ ಮುಗಿಸಬೇಕೆಂದು ಇದೆ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—೧೯೭೪ನೇ ಮಾರ್ಚಿ ಆಖೈರಿನೊಳಗೆ ಇದನ್ನು ಮುಗಿಸಬೇಕಾಗಿದೆ

ಶ್ರೀ ಶರಣಪ್ಪ.—ಈ ಸೇತುವೆ ಮುಗಿಸಿದರೆ ಇದರಿಂದ ಮಂತ್ರಾಲಯಕ್ಕೆ ಹೋಗಲು ಹಾಗೂ ಇತರ ರಾಜ್ಯಗಳ ಕಡೆಗೆ ನೇರ ಸಂಪರ್ಕ ಕಲ್ಪಿಸಿದಂತಾಗುತ್ತದೆ. ಇಷ್ಟು ಹೆಚ್ಚು ಮಹತ್ವವುಳ್ಳ ಸೇತುವೆ ಯಾಗಿರುವುದರಿಂದ ತಕ್ಷಣವೇ ಇದರ ಕೆಲಸಗಳನ್ನು ತೆಗೆದುಕೊಂಡು ಏಕೆ ಮುಗಿಸಬಾರದು ?

ಶ್ರೀ ಹೆಚ್. ಎಂ. ಚನ್ನಬಸಪ್ಪ. —ಈ ಸೇತುವೆಯ ಒಂದು ಕಡೆ ಆದೋನಿ ಆಂಧ್ರ ಪ್ರದೇಶಕ್ಕೆ ಸೇರಿದ್ದು ಇದೆ ಇನ್ನೊಂದು ಕಡೆ ರಾಯಚೂರು ಕಡೆಗೆ ಹೋಗುತ್ತದೆ. ಮಂತ್ರಾಲಯದ ಕಡೆಗೆ ಇದು ಹೋಗುವುದಿಲ್ಲ.

RAMTHAL LIFT IRRIGATION SCHEME ACROSS MALAPRABHA

735. SRI G. P. NANJAYYANAMATH (Guledgud).—

Will the Minister for Public Works and Electricity be pleased to state.—

(*a*) whether the survey work on Ramthal Lift Irrigation Scheme across Malaprabha river in Hungund Taluk has been completed;

(*b*) if so, whether Government is contemplating to take up the work for execution during the current years ?

SRI H. M. CHANNABASAPPA (Minister for Public Work) —

(*a*) Survey work is not yet completed.

(*b*) Does not arise in view of the replies above.

ಶ್ರೀ ಜಿ. ಪಿ. ನಂಜಯ್ಯನ ಮಠ.—ಇಲ್ಲಿನ ಲಿಫ್ಟ್ ಇರಿಗೇಷನ್ ಸ್ಕೀಂ ಇನ್ನು ಎಷ್ಟು ವರ್ಷಗಳಲ್ಲಿ ಪೂರ್ತಿಯಾಗುತ್ತದೆ ?

† ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದರ ಸರ್ವೇ ಕೆಲಸವೆಲ್ಲ ನಡೆದಿದ್ದು ನಮಗೆ ಇದು ಫೀಸಿಬಲ್ ಆಗಿದೆ ಎನ್ನುವುದು ಕಂಡು ಬಂದಿದೆ ಮತ್ತು ಇದನ್ನು ಕಾರ್ಯಗತಮಾಡಬೇಕು. ಆದರೆ ಇದಕ್ಕೆ ಸಂಬಂಧವಾಗಿ ಕೃಷ್ಣಾ ನದಿ ನೀರಿನ ವಿವಾದಗಳು ಬಂದಿರುವುದರಿಂದ ಅದು ಇತ್ಯರ್ಥವಾದ ಮೇಲೆ ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ.

ALLOTMENT OF MANURE TO GULBARGA DISTRICT

743. SRI A. V. PATIL (Aland).—

Minister for Agriculture and Forests be pleased to state.—

whether the Government has allotted quote of manure to Gulbarga District and if so, the quantity allotted ?

SRI K. H. PATIL (Minister for Agriculture and Forests).—

Yes.

Ammonium Sulphate	50 tonnes
Urea	650 tonnes
Complex 15 : 15 : 15 :	50 tonnes